ಬಟ್ಟೆಯ ಖರೀದಿ

ಭಾರತವು ವರ್ಷಂಪ್ರತಿ 6500 ರಿಂದ 7 ಸಾವಿರ ಮಿಲಿಯ ಗಜ ಒಟ್ಟೆ ಉಪಯೋಗಿಸುವುದು. ಇದರಲ್ಲಿ ಭಾರತದ ಮಿಲ್ಲುಗಳು 4 ಸಾವಿರ ಮಿಲಿಯ ಗಜ ಕೈ ಮಗ್ಗದಿಂದ 2 ಸಾವಿರ ಮಿಲಿಯ ಗಜ ಇಂಗ್ಲೆಂಡ್, ಜಪಾನುಗಳಿಂದ 700 ಮಿಲಿಯ್ಕ ಗಜ ಬರುತ್ತಿತ್ತು. ಆದುದಾಗುವುದು ನಿಂತಿತು. ಭಾರತ ಮಿಲ್ಲುಗಳು 6600 ಮಿಲಿಯ್ಕ ಗಜ ಮಾತ್ರ ತಯಾರು ಮಾಡುವುದು ಕೈಮಗ್ಗದವರಿಗೆ ನೂಲಿಲ್ಲ ನೇಯುವುದು ನಿಂತಿತು.

ಮಿಲ್ ತಯಾರಿಕೆಯಲ್ಲಿ ಶೇಕಡ 30 ರಷ್ಟು ಮಿಲಟರಿಯವರಿಗೆ ಮೀಸಲಾಗಿದೆ. ಸ್ವಲ್ಪ ಪರದೇಶಕ್ಕೂ ರಫಾನೆಯಾಗುತ್ತಿದೆ. ಮಿಲಟರಿಯವರಿಗೆ ಕೊಟ್ಟು ರಫ್ತುಮಾಡಿದರೂ ಭಾರತ ಮಿಲ್ಲಿನವರು ಈ ದೇಶಕ್ಕೆ ಬೇಕಾದಷ್ಟರಲ್ಲಿ ಅರ್ಧಭಾಗ ತಯಾರುಮಾಡಬಹುದು. ಯಾತಕ್ಕೆ ಈಗ ಒಟ್ಟೆ ಬೆಲೆ 100 ಕ್ಕೆ 500 ರಿಂದ 600 ರವರಿಗೆ ಏರಿದೆ. ಕೂಲಿಗಳ ಸಂಬಳ ಹೆಚ್ಚಿಸಿದೆ ಎನ್ನಬಹುದು? ಇದಕ್ಕೊಕ್ಕೇಸ್ಕರ ಶೇಕಡ 500 ರಂತೆ ಒಟ್ಟೆ ಬೆಲೆ ಹೆಚ್ಚಿಸಬಹುದೆ! ಬಂಗಾಳಾ ಮಿಲ್ ಅಸೋಸಿಯ್ಕರವರು 1942 ರಲ್ಲಿ ತಯಾರಾದದ್ದರಿಂದ 1943 ರಲ್ಲಿ ಎರಡರಷ್ಟು ತಯಾರು ಮಾಡುತ್ತೇವೆಂದು ಹೇಳಿದ್ದರು! ಸರ್ಕಾರದವರು ಹೆತ್ತಿಧಾರಣೆ ಕನ್ಮಿ ಮಾಡಿತ್ತೇವೆಂದು ಭರವಸೆ ಕೊಟ್ಟರು ಇವ್ವಾದರೂ ಇನ್ನೂ ಯಾತಕ್ಕೆ ಒಟ್ಟೆ ಧಾರಣೆ ಇಳಿದಿಲ್ಲ.

ಂ ಂ

ನ್ಯಾಯವಿಧಾಯಕ ಸಭೆ.

ಮೈಸೂರು ನ್ಯಾಯವಿಧಾಯಕಸಭೆಯ ಬಡ್ಜೆಟ್ ಅಧಿವೇಶನವು ಬೆಂಗಳೂರು ಆತಾರಕ ಕಛೇರಿಯ ಸಭಾಮಂದಿರದಲ್ಲಿ ಈ ತಿಂಗಳು 21 ನೇ ತಾರೀಖಿನಿಂದ ನಡೆಯುವ್ವದು.

ಂ ಂ

ಆಲ್ಲಾ ಬಕ್ಷ್ಯರ ಹಂತಕರು

ಮಾಜಿ ಸಿಂಧ್ ಮಹಾಪ್ರಧಾನರನ್ನು ಖೂನಿಮಾಡಿದವರು ಹೂರ್ ಪಂಗಡದವರೆಂದು ಪೋಲೀಸಿನವರು ಪತ್ತೆ ಮಾಡಿರುತ್ತಾರೆ.

ಮಾಸ್ಕೋ ಮುತ್ತಿಗೆ

ಅಂಕಾರ ಸುದ್ದಿಯಂತೆ ಹಿಟ್ಲರ್ ಮಾಸ್ಕೋ ನಗರವನ್ನು ಸುತ್ತಲು 70 ಡಿವಿಜ್ಞ್ ಅಂದರೆ ಸುಮಾರು 10 ಲಕ್ಷ ಸೈನ್ಯವನ್ನು ಜಮಾಯಿಸಿರುವನೆಂದು ತಿಳಿಯಬಂದಿದೆ.

ಂ ಂ

ನಿರುದ್ಯೋಗವಿಚಾರದು

ಬ್ರಿಟಿಷ್ ಒಳಾಡಳಿತದ ಸಚಿವರಾರಾದ ಹರ್ಬರ್ಟ್ ಮಾರಿಸನ್‌ರವರು ನೂತನ ಜಗತ್ತು ಸರಿಯಾಗಿರಬೇಕಾದರೆ ಯಾರಿಗೂ ನಿರುದ್ಯೋಗವು ಇರಬಾರದೆಂದು ಹೇಳಿದರು.

ಂ ಂ

ಇಟಲಿಯವರ ನಷ್ಟ

ಇಟಾಲಿಯು ರಣರಂಗಕ್ಕೆ ಇಳಿದು ನಿನ್ನೆಗೆ 3 ವರ್ಷವಾಯಿತ. ಈಗಿನವರೆಗೆ ಇಟಲಿ ನೌಕಾ ಸಹಿತ ಏಪ್ರಿಲ್ ಆಖೈರುವರೆಗೆ 2200 ಮಂದಿ ಸತ್ತರು. 14 ಸಾವಿರ ಮಂದಿ ಪತ್ತೆಯಿಲ್ಲ.

ಂ ಂ

ಭಾರತದ ಕ್ಷಾಮ

ಈಗ ಭಾರತದಲ್ಲಿ ಬೌಂಡು 1 ಕ್ಕೆ ಒಂದು ಇಲ್ಲವೆ ಒಂದೂವರೆ ಆಣೆಗೆ ಸಿಗುತ್ತಿದ್ದ ಅಕ್ಕಿ ಮುಂಬಾಯಿನಲ್ಲಿ 12 ಆಣೆಯಾಗಿರುವುದನ್ನು ನೋಡಿ ಲಂಡನ್ ವರ್ತಮಾನ ಪತ್ರಿಕೆಯಾದ ನ್ಯೂಸ್ಟೇಟ್ಸ್‌ಮನ್ ಮತ್ತು ನೇಷನ್ ಹೇಳುವುದು. ಭಾರದ ಕ್ಷಾಮವನ್ನು ಮನುಷ್ಯಮಾಡಿದ್ದು ಎಂದು. ಹಾಗಾದರೆ ದೇವರು ಮಾಡಿದ್ದಲ್ಲವೆಂದಾಯಿತು!

ಂ ಂ

ನೋಟಿನ ಚಲಾವಣೆ

1942 ರ ಅಂತ್ಯದಲ್ಲಿ ಭಾರತದಲ್ಲಿ ಆಹಾರ ಬೆಲೆಯು ಶೇಕಡ 139 ಕ್ಕೆ ಮಿಗಿತು. ಇಂಗ್ಲೆಂಡಿನಲ್ಲಿ ಶೇಕಡ 60 ರಷ್ಟು ಮಾತ್ರ ಹೆಚ್ಚಿತು. ಇಂಗ್ಲೆಂಡಿನಲ್ಲಿ ನೋಟುಗಳ ಚಲಾವಣೆ ಶೇಕಡ 72 ರಂತೆ ಹೆಚ್ಚಿತು ಆದರೆ ಭಾರತದಲ್ಲಿ ಶೇಕಡ 390 ರಂತೆ ರಂತೆ ಹೆಚ್ಚಿತು.

ವಾರ್ತಾತರಂಗ

ಅಮೇರಿಕಾದಿಂದ ಮಿ || ವಿಲಿಯಂ ಫಿಲಿಪ್ಸರು ಜುಲೈ ಇಲ್ಲವೇ ಆಗಸ್ಟ್ ನಲ್ಲಿ ಭಾರತಕ್ಕೆ ಒರುವ ಯೋಜನೆ ಇತ್ತು. ಈಗ ಇವರು ಈ ತಿಂಗಳು ಅಂತ್ಯದಲ್ಲಿ ಅಥವಾ ಜುಲೈ ಪ್ರಾರಂಭದಲ್ಲಿ ಭಾರತಕ್ಕೆ ಬರುತ್ತಾರೆಂದೂ ಒಂದಕೂಡಲೆ ಗಾಂಧೀಜಿ, ಶ್ರೀ ನೆಹರು ಮುಂತಾದವರನ್ನು ನೋಡುತ್ತಾರೆಂದೂ ಹೇಳಲಾಗಿದೆ.

ರೋಂನಲ್ಲಿದ್ದ ಸ್ವೀಡಿಷ್ ಪ್ರಜೆಗಳು ಆ ನಗರವನ್ನು ಬಿಟ್ಟು ಹೊರಡಬೇಕೆಂದು ಸ್ವೀಡಿಷ್ ಸರಕಾರದ ಆಜ್ಞೆಯಾಗಿದೆ.

ಆಫ್ರಿಕಾ ಸಮುದ್ರ ತೀರ 3000 ಮೈಲಿ ಅಂದರೆ ಆಟ್ಲಾಸ್ ಪರ್ವತದಿಂದ ಬರ್ಕ್‌ನರಿವಿಗೆ, ಏಕ್ಸಿಸ್‌ನವರು 5 ಮುಖ್ಯವಾದ ಸೇನೆಪಂಗಡವನ್ನೂ ಹೇಳತೀರದಷ್ಟು ವಿಪುಲ ಯುದ್ಧನೌಕೆಗಳನ್ನೂ ಇನ್ನೂ ಬೇರೆ ಬೇಕಾದ ಯುದ್ಧ ಸಾಮಗ್ರಿಗಳನ್ನೂ ಜಮಾಯಿಸಿಕೊಂಡು ಯಾವ ನಿಮಿಷ ಹುಕುಂ ಕೊಡುವರೋ ಎಂದು ಕಾದಿರುವರು. ಇದನ್ನು ನೋಡಿದರೆ ಈ ಪ್ರಳಯಾಂತರದಿಂದ ಯುದ್ಧವು ಬೇಗ ವ್ಯವಗಿಯುವುದೆಂದು ಕಾಣುವುದು. ಮಿ || ಚರ್ಚಿಲರೂ, ಮಿ || ರೂಸ್ವೆಲ್ಟರೂ ಈಗ ನಡೆಯುವ ವಿವರವನ್ನು ರಷ್ಯಾ ಮತ್ತು ಚೈನಾಕ್ಕೆ ಕೂಲಂಕುಶವಾಗಿ ತಿಳಿಸುತ್ತಾರೆ.

ಟ್ಯುನಿಷಿಯಾ ಯುದ್ಧದಲ್ಲಿ ಕಾರ್ಪೋರಲ್ ಹಿಟ್ಲರ್ ಸಹಾಯ ಮಾಡಿದನೆಂದು ಮಿ || ಚರ್ಚಿಲ್ಲರು ಹೇಳುತ್ತಾರೆ.

ಕಳೆದ ಶನಿವಾರ ಡಾ || ಗೋಬೆಲ್ಸ್ ರೇಡಿಯೋ ಭಾಷಣ ಮಾಡುತ್ತಾ, ಬ್ರಿಟಿಷ್ ವಿಮಾನ ಧಾಳಿ ಹೆಚ್ಚುಹೆಚ್ಚಾಗಿ ಪದೇಪದೇ ಆಗುತ್ತಿದೆ. ಈ ವಿಮಾನ ಧಾಳಿಗೆ ನಮ್ಮ ಉತ್ತರ ಸ್ಟಬ್‌ಮೆರಿನ್ ಎಂದು ಹೇಳುತ್ತಾ, ನಾವು ಶತ್ರುಗಳ ಸಮುದ್ರದಲ್ಲಿ ಮೈನುಗಳನ್ನು ಹೇರಳವಾಗಿ ಹರಡುತ್ತಿದ್ದೇವೆ ಯೂರೋಪು ಮುತ್ತುತ್ತೇವೆಂದು ಬೆದರಿಸುವರು, ಅದು ಆಗದ ಕೆಲಸ, ಅಲ್ಲದೆ ಫೆಬ್ರವರಿ ತಿಂಗಳಿಂದ ೩ || ಮಿಲಿಯ ಜನರು ಕೆಲಸಕ್ಕೆ ಹೊಸದಾಗಿ ಸೇರಿರುತ್ತಾರೆ, ಜರ್ಮನಿಗೆ ಆದ ನಷ್ಟವನ್ನು ನಾವು ತೆಗೆದುಕೊಳ್ಳದೇ ಇರುವುದಿಲ್ಲ. ಈಗ ಜರ್ಮನಿಯರೆಲ್ಲರೂ ಸಹಾಯಮಾಡಬೇಕು. ನಾವು ಕೈಲಾದ್ದನ್ನು ಮಾಡಿದ್ದೇವೆ ಮತ್ತು ಮಾಡುತ್ತಿದ್ದೇವೆ, ನಾವೂ ಇಂಗ್ಲೆಂಡಿನ ಮೇಲೆ ಬಲವಾದ ಧಾಳಿಯನ್ನು ಪುನಃ ಆರಂಭಿಸಿರುತ್ತೇನೆ, ರಷ್ಯಾದ ಯುದ್ಧದ ವಿಷಯದಲ್ಲಿ ಈಗ ನಾನು ಒಂದು ಮಾತನ್ನೂ ಹೇಳುವುದಿಲ್ಲ, ಎಂದು ಹೇಳಿದನು.

ಟ್ಯುನಿಷಿಯಾದಲ್ಲಿ ಮಿತ್ರರಿಗೆ ಕೈಸೆರೆಯಾದ ಜರ್ಮನ್ ದಳಪತಿ ವಾನ್ ಆರ್ನಿಂನನ್ನು ಇಂಡ್ಲೆಂಡಿನ ಒಂದು ಭಾರಿ ಹೋಟಲಿನಲ್ಲಿ ಪ್ರತ್ಯೇಕವಾಗಿ ಇಟ್ಟಿರುತ್ತಾರೆ ಇವರ ಸಂಗಡ ಮತ್ಯಾವ ಇಟಾಲಿಯನ್ ಅಧಿಕಾರಿಗಳೂ ಇಲ್ಲ.

ಈಗ ಮೆಡಿಟರೇನಿಯನ್ ಯುದ್ಧ ಪ್ರಾರಂಭವಾಯಿತೆನ್ನಬಹುದು.

ಹಾಲೆಂಡಿನಲ್ಲಿದ್ದ ರಾಣಿಯು ಅರಮನೆಯನ್ನು ಜರ್ಮನಿಯವರು ಒಂದು ಆಸ್ಪತ್ರೆಗೆ ಕೊಟ್ಟಿರುವುದು.

ಅಹಮದಾಬಾದಿನಲ್ಲಿ ಇನ್ನು ಮುಂದೆ ಯಾರೂ ಒಂದು ಚೀಲಕ್ಕಿಂತ ಹೆಚ್ಚಾಗಿ ಕಲ್ಲಿಜ್ಜಲನ್ನು ಕೊಳ್ಳಬಾರದೆಂದೂ 14 ಚೀಲಕ್ಕಿಂತ ಹೆಚ್ಚಾಗಿ [illegible] ವವರು ಹೆಚ್ಚಾದ್ದನ್ನು ಇನ್ನು 15 ದಿವಸದ ಒಳಗಾಗಿ ವಾಪಸು ಕೊಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆ.

ಅಮೇರಿಕಾದಲ್ಲಿ ಈ ವರ್ಷ ಅಂತ್ಯದೊಳಗಾಗಿ ಯುದ್ಧೋದ್ಯಮ ಕಾರ್ಯಕ್ಕೆ 185 ಲಕ್ಷ ಸ್ತ್ರೀಯರು ಬೇಕೆಂದು ಸರ್ಕಾರಿ ಪ್ರಕಟಣೆಯಾಗಿದೆ.

ತುರ್ಕಿಯೂ ರಣರಂಗಕ್ಕೆ ಧುಮುಕುವಕಾಲ ಒದಗಬಹುದೆಂದು ತುರ್ಕಿ ಪ್ರೆಸಿಡೆಂಟರು ಊಹಿಸುತ್ತಾರೆ.

ಭಾರತದಲ್ಲಿ ನ್ಯಾಷನಲ್ ಸರ್ಕಾರ ಒಂದೇ ಆಹಾರ ಕಷ್ಟತಪ್ಪಿಸುವುದು ಎಂದು ಲಂಡನ್ ನ್ಯೂಸ್ಟೇಟ್ಸ್‌ಮನ್ ಹೇಳುತ್ತದೆ.

ಭಾರತವನ್ನು ಏಸು ಹೇಳಿದ ರೀತಿಯಲ್ಲಿ ರಾಜ್ಯವಾಳಿರಿ, ದರ್ಪದಿಂದಲ್ಲ ಎಂದ ಎರ್ಮಿಂಗ್‌ಹ್ಯಾಮ್ ಬಿಷಪ್‌ರು ಹೇಳುತ್ತಾರೆ.